ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನೆ ವಿಭಾಗ, ........................
ಚಾ.ವಿ.ಸ.ನಿ.ನಿ., ಮೈಸೂರು-570001
ದೂರವಾಣಿ: 0821-2434165

ಸ್ವಾತಂತ್ರ್ಯದ ಅಮೃತ ಮಹೋತ್ಸವ

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
O&M Division, ...................
CESC, Mysuru-570001
Web Site: https://cescmysore.karnataka.gov.in
E-Mail: ..........................................

Company Identity Number (CIN): U40109KA2004SGC035177

ಕ್ರಮಾಂಕ: ಕಾ.ನಿ.ಇಂ(ವಿ)/ಸ.ಕಾ.ಇಂ(ಕ)/ಸ.ಇಂ(ತಾ)/2022-23/ ದಿನಾಂಕ: .07.2022

ರವರಿಗೆ,

-----------------------------

-----------------------------

-----------------------------

ಮಾನ್ಯರೇ,

**ವಿಷಯ:** ತಮ್ಮ ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಿಕೊಳ್ಳುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: ......................... ರಂದು, ............................ ಗ್ರಾಮದ ......................... ಸರ್ವೆ ನಂಬರ್ ಜಮೀನಿನಲ್ಲಿ ಕೃಷಿ ನೀರಾವರಿ ಪಂಪ್‌ಸೆಟ್‌ಗೆ ಪಡೆದುಕೊಂಡಿರುವ ಅಕ್ರಮ ವಿದ್ಯುತ್ ಸಂಪರ್ಕವನ್ನು ಗಮನಿಸಿ ಇಂದು ಅದನ್ನು ಕಡಿತಗೊಳಿಸಲಾಗಿರುತ್ತದೆ. ಈ ಪತ್ರ ತಲುಪಿದ 7 ದಿನಗಳಲ್ಲಿ ತಮ್ಮ ಕೃಷಿ ನೀರಾವರಿ ಪಂಪ್‌ಸೆಟ್‌ಗೆ ಪಡೆದುಕೊಂಡಿರುವ ವಿದ್ಯುತ್ ಸಂಪರ್ಕವನ್ನು, ಚಾ.ವಿ.ಸ.ನಿ.ನಿ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಹಾಗೂ ಅಗತ್ಯ ದಾಖಲೆಗಳನ್ನು ಉಪವಿಭಾಗದ ಕಛೇರಿಯಲ್ಲಿ ಸಲ್ಲಿಸಿ ಸಕ್ರಮ ಮಾಡಿಕೊಳ್ಳಲು ತಿಳಿಸಲಾಗಿದೆ.

ಒಂದು ವೇಳೆ ಕಡಿತಗೊಳಿಸಿರುವ ಅಕ್ರಮ ವಿದ್ಯುತ್ ಸಂಪರ್ಕವನ್ನು ಮುಂದಿನ 7 ದಿನಗಳಲ್ಲಿ ಸಕ್ರಮಗೊಳಿಸದೇ ತಮ್ಮ ಕೃಷಿ ನೀರಾವರಿ ಪಂಪ್‌ಸೆಟ್‌ಗೆ ಅಕ್ರಮ ವಿದ್ಯುತ್ ಸಂಪರ್ಕವನ್ನು ಮತ್ತೊಮ್ಮೆ ಮುಂದುವರೆಸಿದರೆ ಕಠಿಣ ಕಾನೂನು ಕ್ರಮಗಳನ್ನು ತಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ಚಾ.ವಿ.ಸ.ನಿ.ನಿ., ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಅಥವಾ ಯಾವುದೇ ರೀತಿಯ ವಿದ್ಯುತ್ ಸಮಸ್ಯೆಗಳಿಗಾಗಿ ಚಾ.ವಿ.ಸ.ನಿ.ನಿ.,ಯ ಕೇಂದ್ರೀಯ ದೂರು ನಿರ್ವಹಣಾ ಘಟಕದ **ಉಚಿತ ದೂರವಾಣಿ ಸಂಖ್ಯೆ 1912 ಗೆ ಕರೆಮಾಡಿ** ಅಥವಾ **+91-9448991912 ಸಂಖ್ಯೆಗೆ ವಾಟ್ಸಾಪ್ ದೂರು** ದಾಖಲಿಸಲು ಸೂಚಿಸಿದೆ.

ಈ ಪತ್ರದ ಜೊತೆ ಚಾ.ವಿ.ಸ.ನಿ.ನಿ., ಯ ಸಾರ್ವಜನಿಕ ಪ್ರಕಟಣೆಯನ್ನು ಲಗತ್ತಿಸಲಾಗಿದೆ.

**ಸೂಚನೆ:** ತಮ್ಮ ಜಮೀನಿನ ಸರ್ವೆ ನಂಬರ್ ಹಾಗೂ ಇತರೆ ವಿವರಗಳನ್ನು ಸರ್ಕಾರದ ಅಧಿಕೃತ "ದಿಶಾಂಕ್ (Dishaank) ಮೊಬೈಲ್ ಅಪ್ಲಿಕೇಷನ್" ಮುಖಾಂತರ ಪಡೆದುಕೊಳ್ಳಲಾಗಿರುತ್ತದೆ.

ತಮ್ಮ ವಿಶ್ವಾಸಿ,

ಶಾಖಾಧಿಕಾರಿ
ಕಾರ್ಯ ಮತ್ತು ಪಾಲನಾ ಶಾಖೆ,
ಚಾ.ವಿ.ಸ.ನಿ.ನಿ.,..................



Scanned with CamScanner


# ಕರ್ನಾಟಕ ಸರ್ಕಾರ, ಇಂಧನ ಇಲಾಖೆ


## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

# ಸಾರ್ವಜನಿಕ ಪ್ರಕಟಣೆ

## ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಿಕೊಳ್ಳುವ ಸದಾವಕಾಶ





ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಕಾರ್ಯಕ್ರಮವನ್ನು ಚಾ.ವಿ.ಸ.ನಿ.ನಿ., ____________________ ಉಪವಿಭಾಗವು ಜೂನ್-2022 ರಿಂದ ಹಮ್ಮಿಕೊಂಡಿದ್ದು, ರೈತರಿಗೆ ಹೆಚ್ಚಿನ ತೊಂದರೆಗಳಾಗುವ ಸಾಧ್ಯತೆಗಳಿರುತ್ತವೆ. ಅಲ್ಲದೇ, ಸದರಿ ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಳ್ಳುವ ಅವಕಾಶವಿರುವುದರಿಂದ ರೈತ ಬಾಂಧವರು ತಮ್ಮ ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಅವಶ್ಯಕವಿರುವ ವಿದ್ಯುತ್ ಸಂಪರ್ಕವನ್ನು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿ ಹಾಗೂ ಈ ಕೆಳಕಂಡ ಮೊತ್ತಗಳನ್ನು ಚಾ.ವಿ.ಸ.ನಿ.ನಿ., ಗೆ ಪಾವತಿಸಿ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

**ಅಗತ್ಯ ದಾಖಲೆಗಳು:**

1. ಅರ್ಜಿ ಮತ್ತು ಆರ್.ಟಿ.ಸಿ (ಮೂಲ ಪ್ರತಿ).
2. ಪಡಿತರ ಚೀಟಿ.
3. ಬೋರ್‌ವೆಲ್ ಸರ್ಟಿಫಿಕೆಟ್.
4. ಆಧಾರ್ ಕಾರ್ಡ್.
5. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ.
6. ಗ್ರಾಮ ಲೆಕ್ಕಾಧಿಕಾರಿಯವರಿಂದ ಕೊಳವೆ ಬಾವಿ ದೃಢೀಕರಣ ಪತ್ರ.
7. ಪರವಾನಗಿ ಹೊಂದಿರುವ ವಿದ್ಯುತ್ ಗುತ್ತಿಗೆದಾರರ ದೃಢೀಕರಣ ಪತ್ರ (ಮೊಹರು ಅಥವಾ ಲೈಸೆನ್ಸ್ ನ ಛಾಯಾ ಪ್ರತಿ).
8. ಜಿಲ್ಲಾ ಅಂತರ್ಜಲ ಇಲಾಖೆಯಿಂದ ಕೊಳವೆ ಬಾವಿ ಕೊರೆಸಿರುವುದಕ್ಕೆ ಅನುಮತಿ ಪತ್ರ (ಅನ್ವಯಿಸಿದ್ದಲ್ಲಿ).
9. ರೂ. 200/- ರ ಛಾಪಾ ಕಾಗದದಲ್ಲಿ Indemnity Bond.
10. ಆರ್.ಡಿ ಸಂಖ್ಯೆಯುಳ್ಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ (ಅನ್ವಯಿಸಿದ್ದಲ್ಲಿ).

**ಸಕ್ರಮಗೊಳಿಸಿಕೊಳ್ಳಲು ಪಾವತಿಸಬೇಕಾದ ಮೊತ್ತ (ರೂ. ಗಳಲ್ಲಿ)**

| | 5 ಹೆಚ್.ಪಿ | 7.5 ರಿಂದ 8 ಹೆಚ್.ಪಿ | 10 ಹೆಚ್.ಪಿ |
|---|---|---|---|
| ನೊಂದಣಿ ಶುಲ್ಕ (ಜಿ.ಎಸ್.ಟಿ ಒಳಗೊಂಡು) | 59.00 | 59.00 | 59.00 |
| ಆರಂಭಿಕ ಭದ್ರತಾ ಠೇವಣಿ(1280*1HP) | 6,400.00 | 10,240.00 | 12,800.00 |
| ಅಭಿವೃದ್ಧಿ ಶುಲ್ಕ (10,000*1) | 10,000.00 | 10,000.00 | 10,000.00 |
| ಮೇಲ್ವಿಚಾರಣಾ ಶುಲ್ಕ (ಜಿ.ಎಸ್.ಟಿ ಒಳಗೊಂಡು) | 177.00 | 177.00 | 177.00 |
| ಒಟ್ಟು ಮೊತ್ತ | **16,636.00** | **20,476.00** | **23,036.00** |



Scanned with CamScanner

**ಇತರೆ ಸೂಚನೆಗಳು:**

- ರೈತರಿಗೆ ಅಥವಾ ಗ್ರಾಹಕರಿಗೆ ಪ್ರತ್ಯೇಕ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಯಾವುದೇ ಯೋಜನೆಯು ಚಾ.ವಿ.ಸ.ನಿ.ನಿ.,ಯಲ್ಲಿ ಇರುವುದಿಲ್ಲ.
- ತಮ್ಮ ಕೃಷಿ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣಕ್ಕೆ ಪ್ರತ್ಯೇಕ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನ್ನು ಚಾ.ವಿ.ಸ.ನಿ.ನಿ., ವತಿಯಿಂದ ಒದಗಿಸಿಕೊಡಲಾಗುವುದೆಂದು ಯಾರಾದರೂ ವಂಚಿಸಲು ಯತ್ನಿಸಿದಲ್ಲಿ ಅಂತಹ ವಂಚನೆಗೆ ರೈತರು ಒಳಗಾಗಬಾರದೆಂದು ತಿಳಿಸಲಾಗಿದೆ.
- ಅಧಿಕ ವಿದ್ಯುತ್ ಒತ್ತಡ ಹೊಂದಿಲ್ಲದ ವಿದ್ಯುತ್ ಪರಿವರ್ತಕಗಳಿಂದ ಎಲ್.ಟಿ ಮಾರ್ಗವನ್ನು ವಿಸ್ತರಣೆ ಮಾಡಿ ಹೊಸ ವಿದ್ಯುತ್ ಸಂಪರ್ಕಗಳನ್ನು ಒದಗಿಸುವುದು ಚಾ.ವಿ.ಸ.ನಿ.ನಿ., ಯ ಜವಾಬ್ದಾರಿಯಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಸದರಿ ವಿದ್ಯುತ್ ಪರಿವರ್ತಕಗಳಿಂದ ವಿದ್ಯುತ್ ಸಂಪರ್ಕ ಪಡೆದಿರುವ ಹಾಲಿ ಗ್ರಾಹಕರು ಮುಂದಿನ ಕಾಮಗಾರಿಗಳಿಗೆ ತಡೆಯೊಡ್ಡುವುದು ಕಾನೂನು ಪ್ರಕಾರ ಅಪರಾಧವಾಗಿರುತ್ತದೆ.
- ಈ ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ ಪಾವತಿಗಳನ್ನು ಹೊರತುಪಡಿಸಿ ಹೆಚ್ಚಿನ ಯಾವುದೇ ಪಾವತಿಗಳನ್ನು ಯಾರಿಗಾದರೂ ಪಾವತಿಸಿದಲ್ಲಿ ಅದಕ್ಕೆ ಚಾ.ವಿ.ಸ.ನಿ.ನಿ., ಹೊಣೆಯಾಗುವುದಿಲ್ಲ.
- ಅನಧಿಕೃತ ವಿದ್ಯುತ್ ಕಾಮಗಾರಿಯಿಂದ ಅಥವಾ ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಅಪಘಾತಗಳಾದಲ್ಲಿ ಅದಕ್ಕೆ ಸಂಬಂಧಪಟ್ಟ ಜಮೀನಿನ ಮಾಲೀಕರೇ ನೇರ ಜವಾಬ್ದಾರರಾಗಿರುತ್ತಾರೆ.
- ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ವಿದ್ಯುತ್ ಸಂಪರ್ಕವನ್ನು ಯಾವುದೇ ಮುನ್ಸೂಚನೆ ನೀಡದೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದರಿಂದ ಉಂಟಾಗಬಹುದಾದ ನಷ್ಟಗಳಿಗೆ ಚಾ.ವಿ.ಸ.ನಿ.ನಿ., ಯು ಹೊಣೆಯಾಗಿರುವುದಿಲ್ಲ.
- ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕಾಲದಲ್ಲಿ ಸಕ್ರಮಗೊಳಿಸದಿದ್ದಲ್ಲಿ, ಚಾ.ವಿ.ಸ.ನಿ.ನಿ., ಗೆ ಉಂಟಾಗಬಹುದಾದ ನಷ್ಟಗಳಿಗೆ ಸಂಬಂಧಪಟ್ಟ ಜಮೀನಿನ ಮಾಲೀಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
- ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಚಾ.ವಿ.ಸ.ನಿ.ನಿ., ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
- ಈ ಮೇಲ್ಕಂಡ ಅಂಶಗಳಿಗೆ ವ್ಯತಿರಿಕ್ತವಾದ ಯಾವುದೇ ಅಂಶಗಳಿಗೆ ಯಾರಾದರೂ ಆಮಿಷ ಒಡ್ಡಿದಲ್ಲಿ ದೂರವಾಣಿ ಸಂಖ್ಯೆ: __________________ ಗೆ ಅಥವಾ ಚಾ.ವಿ.ಸ.ನಿ.ನಿ., ದೂರು ನಿರ್ವಹಣಾ ಘಟಕದ **ಉಚಿತ ದೂರವಾಣಿ ಸಂಖ್ಯೆ 1912 ಗೆ ಕರೆಮಾಡಿ** ಅಥವಾ **+91-9448991912 ಸಂಖ್ಯೆಗೆ ವಾಟ್ಸಾಪ್ ದೂರು** ದಾಖಲಿಸಲು ಸೂಚಿಸಿದೆ.

ಸಹಿ/-

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),

ಕಾ ಮತ್ತು ಪಾ ಉಪವಿಭಾಗ, ಚಾ.ವಿ.ಸ.ನಿ.ನಿ.,

__________________.



Scanned with CamScanner